1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.10101/2012

ದಿಃ 14.11.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 5

ಚಾಸಾಃ 31

| | |
|---|---|
| ಹೆಸರು | ಃ ಶ್ರೀವಿದ್ಯಾ |
| ಗಂಡನ ಹೆಸರು | ಃ ವಿವೇಕ್.ಎಸ್.ಜಿ. |
| ವಯಸ್ಸು | ಃ 42 ವರ್ಷ |
| ಉದ್ಯೋಗ | ಃ ಸಾಫ್ಟ್‌ವೇರ್ ಇಂಜಿನಿಯರ್ |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ಆರೋಪಿ ಗೊತ್ತು, ನನಗೆ 2006-07ರಲ್ಲಿ ಹರ್ಷಸಿಂಹ ಎಂಬುವರ ಮುಖಾಂತರ ಐಶ್ವರ್ಯ ಪ್ರಾಜೆಕ್ಟ್ ಮತ್ತು ರೆಸಿಡೆನ್ಸಿ ಗ್ರೂಪ್‌ನ ಅಡಿಯಲ್ಲಿ ಬೆಂಗಳೂರಿನ ಸುತ್ತ-ಮುತ್ತ ವಿವಿಧ ಹೆಸರುಗಳಲ್ಲಿ ವಸತಿ ಬಡಾವಣೆಗಳನ್ನು ನಿರ್ಮಿಸಿ ಅಭಿವೃದ್ಧಿಪಡಿಸುತ್ತಿದ್ದಾರೆಂದು ತಿಳಿದುಬಂದಿರುತ್ತದೆ. ನಂತರ ಆರೋಪಿತರ ಕಚೇರಿಗೆ ಹೋಗಿ ಆತನ ಬಗ್ಗೆ ವಿಚಾರಿಸಿ ದೇವನಹಳ್ಳಿ ಬಳಿ ಇರುವ ಏರೋಜೋನ್ ಬಡಾವಣೆಯಲ್ಲಿ ಎರಡು ಸೈಟ್‌ಗಳಲ್ಲಿ 30 x 50 ಎಂಬ ಸೈಟ್‌ಗೆ 6 ಲಕ್ಷ ರೂ, 40 x 60 ಎಂಬ ಸೈಟ್‌ಗೆ 10,80,000/- ರೂ ಬೆಲೆ ನಿಗಧಿ ಮಾಡಿದ್ದು, ಅದೇ ರೀತಿ ಬಿಡದಿಯ ಬಳಿ ಗ್ಲೋಬಲ್ ಸಿಟಿ ಎಂಬ ಬಡಾವಣೆಯಲ್ಲಿ 30 x40 ಎಂಬ ಸೈಟ್‌ಗೆ 11,25,000/- ರೂ, ಬಿಡದಿಯ ನ್ಯೂ ಕೌಂಟಿ ಎಂಬ ಬಡಾವಣೆಯಲ್ಲಿ ಒಟ್ಟು 3 ಸೈಟ್‌ಗಳಿಗೆ ತಲಾ ರೂ 6,60,000/- ನಂತೆ ಬೆಲೆ ನಿಗಧಿ ಮಾಡಿ ಮತ್ತು ಮೈಸೂರಿನ ರಾಯಲ್ ಕೌಂಟಿ

ಎಂಬ ಬಡಾವಣೆಯಲ್ಲಿ 30 x40 ಎಂಬ ಸೈಟ್‌ಗೆ 6 ಲಕ್ಷ ರೂಗೆ, ಹೊಸಕೋಟೆಯ ಬಳಿಯ ಹೊಸ್ಕನ ಎಂಬ ಬಡಾವಣೆಯಲ್ಲಿ 30 x 50 ಎಂಬ 2 ಸೈಟ್‌ಗಳನ್ನು ತಲಾ 5,40,000/- ರೂಗೆ ಖರೀದಿ ಮಾಡಿರುತ್ತೇನೆ. ಮೇಲೆ ತಿಳಿಸಿದ ಎಲ್ಲಾ ನಿವೇಶನಗಳಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರಗಳನ್ನು ಮಾಡಿಕೊಟ್ಟಿರುತ್ತಾರೆ ಹಾಗೂ ಮೇಲೆ ತಿಳಿಸಿದ ನಿವೇಶನಗಳಿಗೆ ಚೆಕ್ ಮೂಲಕ ಒಟ್ಟು 75,50,000/- ರೂ ಹಣವನ್ನು ಮುಂಗಡ ಹಣವಾಗಿ ಪಾವತಿಸಿರುತ್ತೇನೆ. ಅದಕ್ಕೆ ಆರೋಪಿಯು ರಸೀದಿಗಳನ್ನು ಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪತ್ರಗಳನ್ನು ಕ್ರಮವಾಗಿ ನಿಪಿ.8 ರಿಂದ ನಿಪಿ.16 ಎಂದು, ರಸೀದಿಗಳನ್ನು ಕ್ರಮವಾಗಿ ನಿಪಿ.17 ರಿಂದ ನಿಪಿ.25 ಎಂದು ಗುರುತಿಸಲಾಯಿತು. ಕರಾರು ಪತ್ರವನ್ನು ಮಾಡಿಕೊಡುವ ಸಂದರ್ಭದಲ್ಲಿ 2 ವರ್ಷಗಳಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಿ ನಿಯಮಾವಳಿಯಂತೆ ನೀಡಬೇಕಾದ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿ ಕ್ರಯ ಪತ್ರವನ್ನು ನೊಂದಣಿ ಮಾಡಿಕೊಡುವುದಾಗಿ ತಿಳಿಸಿದ್ದರು. ಆದರೆ ಬಡಾವಣೆ ನಕ್ಷೆ ಅನುಮೋದನೆಗೊಂಡಿಲ್ಲವೆಂದು ತಿಳಿಸುತ್ತಾ ನಿವೇಶನವನ್ನು ನೀಡದೆ ಮತ್ತು ಹಣವನ್ನು ವಾಪಸ್ ಕೊಡದೇ ಕಾಲ ತಳ್ಳುತ್ತಿದ್ದರು. ನಾಲ್ಕು ವರ್ಷಗಳ ನಂತರ ಆರೋಪಿತರು ತಮ್ಮ ಕಚೇರಿಯನ್ನು ಮುಚ್ಚಿ ಪರಾರಿಯಾಗಿರುವುದು ತಿಳಿದಿರುತ್ತದೆ. ಆರೋಪಿತರ ಪರಿಚಯ ನನಗೆ ಇರುತ್ತದೆ. 1 ಮತ್ತು 2ನೇ ಆರೋಪಿಗಳು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಿರುತ್ತಾರೆ. ಅವರ ಪರ ವಕೀಲರು ಆರೋಪಿಗಳ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲು: 1ನೇ ಆರೋಪಿ ಪರ ಶ್ರೀ ಬಿಎಸ್ ವಕೀಲರಿಂದ:-</u>

ಆರೋಪಿ ಬೆಂಗಳೂರಿನಲ್ಲಿರುವ ನಿವೇಶನವನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದು, ಅದರ ಸಂಬಂಧವಾಗಿ 75,50,000/- ರೂ ಹಣವನ್ನು ಪಡೆದುಕೊಂಡಿದ್ದು, ಬೆಂಗಳೂರಿನಲ್ಲಿ ನಿವೇಶನಗಳು ಇಲ್ಲದ ಕಾರಣ ಮೈಸೂರಿನಲ್ಲಿ ಸೈಟ್ ಕೊಡುವುದಾಗಿ ಹೇಳಿ ಅದೇ ಮೊತ್ತಕ್ಕೆ ರಸೀದಿ ಕೊಟ್ಟಿರುತ್ತಾರೆ. ನಾನು ಆರೋಪಿಗೆ ಒಟ್ಟು 75,50,000/- ರೂ ರೂ ಹಣವನ್ನು ಮಾತ್ರ ಪಾವತಿ ಮಾಡಿದ್ದೇನೆ, ಅಂದರೆ ಮೈಸೂರಿನಲ್ಲಿರುವ ನಿವೇಶನ ಕೊಡಲು ಕಾರಣ ಬೆಂಗಳೂರಿನಲ್ಲಿ ನಿವೇಶನಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಅಂದರೆ ಒಂದು ನಿವೇಶನಕ್ಕೆ ಹಣವನ್ನು ಕೊಟ್ಟಿರುತ್ತೇನೆ. ಸದರಿ ನಿವೇಶನವನ್ನು ನಾನು ನೋಡಿರುತ್ತೇನೆ. ಕರಾರು ಪತ್ರದಲ್ಲಿ ಲೇ ಔಟ್ ಪ್ಲ್ಯಾನ್ ಹಾಗೂ ಲೈಸೆನ್ಸ್ ಮಂಜೂರಾದ ನಂತರ ಆರು ತಿಂಗಳ ಒಳಗಾಗಿ ಬಾಕಿ ಹಣ ಕೊಟ್ಟು ರಿಜಿಸ್ಟರ್ ಮಾಡುವ ಕಂಡೀಶನ್ ಇದೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ನಿವೇಶನದ ಸಂಖ್ಯೆ ಹಾಗೂ ಚೆಕ್ಕುಬಂದಿಯನ್ನು ತಿಳಿಸಿಲ್ಲ ಎಂದರೆ ಸರಿ. ನನ್ನ ಎರಡು ನಿವೇಶನಗಳ ಪೈಕಿ ಒಂದು ಬೆಂಗಳೂರಿಗೆ ಸಂಬಂಧಪಟ್ಟಿದ್ದು, ಇನ್ನೊಂದು ಮೈಸೂರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸದರಿ ನಿವೇಶನಗಳ ಸಂಬಂಧ ಪರವಾನಗಿ ಸಂಬಂಧಪಟ್ಟ ಇಲಾಖೆಗಳಿಂದ ಬೇರ ಮಂಜೂರಾಗಿರಲಿಲ್ಲ ಎಂಬ ವಿಷಯ ನನಗೆ ಗೊತ್ತಿರಲಿಲ್ಲ. ನಾನು ಆರೋಪಿತರನ್ನು ಸದರಿ ಆಸ್ತಿಯನ್ನು ಬೇಗ ಅಭಿವೃದ್ಧಿಪಡಿಸಿ ನಿವೇಶನವನ್ನು ಕೊಡುವಂತೆ ಒತ್ತಾಯಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಸದರಿ ಪರವಾನಗಿ ತಡವಾಗಿದೆ, ಆದರೆ ನನ್ನಿಂದ ತಡವಾಗಿಲ್ಲ ಎಂದು ನನಗೆ ಸುಮಾರು ಬಾರಿ ಹೇಳಿದ್ದರು ಎಂದರೆ ಸರಿಯಲ್ಲ. ಮೇಲೆ ತಿಳಿಸಿದ ಕರಾರು ಹಾಗೂ ರಸೀದಿ ಆಧಾರದ ಮೇಲೆ ಜಿಲ್ಲಾ ಗ್ರಾಹಕರ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆಂದರೆ ಸರಿ. ಸದರಿ ನ್ಯಾಯಾಲಯ ಆಸ್ತಿಯನ್ನು ಮುಟ್ಟುಗೋಲು ಹಾಕುವಂತೆ ಆದೇಶ ಮಾಡಿದೆ ಎಂದರೆ ಸರಿ. ಸದರಿ

ಪ್ರಕರಣ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ಆರೋಪಿಯ ವಿರುದ್ಧ ಸುಳ್ಳು ಆರೋಪ ಮಾಡಿ ಸುಳ್ಳು ದೂರನ್ನು ಕೊಟ್ಟಿದ್ದೇವೆಂದರೆ ಸರಿಯಲ್ಲ. ನಾವು ಕೊಟ್ಟ ದೂರಿನ ಆಧಾರದ ಮೇಲೆ ಪೊಲೀಸ್‌ನವರು ಆರೋಪಿಯ ಕಚೇರಿಯ ವಿರುದ್ಧ ಎಲ್ಲಾ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆರೋಪಿ ನಮಗೆ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯವನ್ನು ನೀಡುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು: 2ನೇ ಆರೋಪಿ ಪರ ಶ್ರೀ ಕೆಎನ್‌ಎಸ್ ವಕೀಲರಿಂದ:-

ಮೇಲೆ ತಿಳಿಸಿದ ರಸೀದಿಯಲ್ಲಿ ನಾನು ಹಾಗೂ ಇನ್ನೂ ಇಬ್ಬರು ಹಣ ಪಾವತಿ ಮಾಡಿದ ಬಗ್ಗೆ ನಮೂದು ಇದೆ ಎಂದು ಹೇಳುವುದು ಸರಿ. ಆರೋಪಿಗಳು ಯಾವ ಯಾವ ನಂಬರಿನ ನಿವೇಶನಗಳನ್ನು ಕೊಡುತ್ತಾರೆಂದು ನನಗೆ ಈಗ ಹೇಳಲು ಆಗುವುದಿಲ್ಲವೆಂದರೆ ನನಗೆ ನೆನಪಿಲ್ಲ ಎಂದು ತಿಳಿಸುತ್ತಾರೆ. ಆರೋಪಿಯು ರಾಯಲ್ ಎನ್‌ಕ್ಲೇವ್ ಲೇ ಔಟ್‌ನಲ್ಲಿ ನಿವೇಶನ ಕೊಡುತ್ತೇನೆಂದು ತಿಳಿಸಿದ್ದು, ಆ ನಂತರ ಶುಭಂ ಲೇ ಔಟ್‌ನಲ್ಲಿ ಕೊಡುತ್ತೇವೆಂದು ತಿಳಿಸಿರುತ್ತಾರೆ. ನಿಪಿ.8 ಹಾಗೂ 9ರ ರಸೀದಿಗಳು ನ್ಯೂ ಕೌಂಟಿ ಹಾಗೂ ನ್ಯೂ ಸಿಟಿ ಲೇ ಔಟ್‌ಗೆ ಸಂಬಂಧಪಟ್ಟ ರಸೀದಿಗಳು ಎಂದರೆ ಸರಿ. ರಾಯಲ್ ಎನ್‌ಕ್ಲೇವ್ ಹಾಗೂ ಶುಭಂ ಲೇ ಔಟ್‌ಗಳನ್ನು ಆರೋಪಿತರು ಬಿಡದಿ ಹತ್ತಿರ ತೋರಿಸಿರುತ್ತಾರೆ. ಸದರಿ ಜಮೀನುಗಳು ಈಗಲೂ ಸಹ ವ್ಯವಸಾಯದ ಜಮೀನುಗಳು ಎಂದು ಹೇಳುವುದು ಸರಿ. ಬೆಂಗಳೂರಿನ ಸುತ್ತಮುತ್ತಲಿನ ಜಮೀನುಗಳನ್ನು ವ್ಯವಸಾಯೇತರ ಜಮೀನುಗಳಾಗಿ ಮಾರ್ಪಡಿಸುವ ಕ್ರಮವನ್ನು 2007ರಲ್ಲಿ ರದ್ದುಮಾಡಲಾಗಿದೆ ಎಂಬ ವಿಷಯ ನನಗೆ ಗೊತ್ತಿಲ್ಲ. ಸದರಿ ಎಲ್ಲಾ ವಿಷಯಗಳು ನನಗೆ ಗೊತ್ತಿತ್ತು ಎಂದು ಹೇಳುವುದು ಸರಿಯಲ್ಲ. ಸದರಿ ರದ್ದತಿ ಕ್ರಮ 2012 ರಲ್ಲಿ

ರದ್ದಾಯಿತು ಎಂಬ ವಿಷಯ ನನಗೆ ಗೊತ್ತಿಲ್ಲ. ನಾವು ಕೊಟ್ಟ ದೂರಿನ ಮೇಲೆ ಪೊಲೀಸ್‌ನವರು ಸದರಿ ಲೇ ಔಟ್‌ಗಳನ್ನು ಮಾಡಲು ಪರವಾನಗಿ ಕೊಡಬಾರದೆಂದು ಸರ್ಕಾರಕ್ಕೆ ಮನವಿ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ಆದರೆ ಈಗ ಸದರಿ ನಿವೇಶನವನ್ನು ನಾನು ನೋಡಿರುವುದಿಲ್ಲ. ಸದರಿ ಜಮೀನು ಬಗ್ಗೆ ಸಿವಿಲ್ ದಾವೆಗಳು ಬಾಕಿ ಇರುವ ವಿಷಯ ನನಗೆ ಗೊತ್ತಿಲ್ಲ. ಮೇಲೆ ತಿಳಿಸಿದ ಲೇ ಔಟ್‌ಗಳ ಬಗ್ಗೆ ನನಗೆ ಜ್ಞಾನವಿಲ್ಲ ಎಂದು ಹೇಳುವುದು ಸರಿ.

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ

ಪಿಡಬ್ಲ್ಯೂ: 5